ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.,

# P AND SC No. 01/2024

**PW : 1**

ದಿನಾಂಕಃ **10.12.2024**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯವಿಚಾರಣೆಃ ಶ್ರೀ ಎಸ್.ಎಸ್.ಟಿ ವಕೀಲರಿಂದಃ

ನಾನು ಈ ಅರ್ಜಿಯಲ್ಲಿ ಅರ್ಜಿದಾರಳಾಗಿದ್ದು, ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಸಾಕ್ಷ್ಯವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತವೆ.

ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ನಿಪಿ.**1** ಎಂದು, ನನ್ನ ಗಂಡನ ಮತ್ತು ನನ್ನ ಆಧಾರ್ ಕಾರ್ಡಿನ ನೋಟರೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ತಾಳೆ ಮಾಡಿ, ನೋಡಿ ಖಚಿತಪಡಿಸಿಕೊಂಡು, ಮೂಲ ದಾಖಲೆಯನ್ನು ಹಿಂತಿರುಗಿಸಿ, ದೃಢೀಕೃತ ನಕಲನ್ನು ನಿಪಿ.**2** ಮತ್ತು **3** ಎಂದು ಗುರುತಿಸಿಲಾಯಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ನೀಡಿರುವ ವಿಭಾಗೀಯ ಸಿಬ್ಬಂಧಿ ಆದೇಶ ನಿಪಿ.**4** ಎಂದು, ದಿನಾಂಕಃ01.09.2023ರ ಹಿಂಬರವನ್ನು ನಿಪಿ.**5**ಎಂದು, ಸಂತತಿ ನಕ್ಷೆ ಪ್ರಮಾಣ ಪತ್ರವನ್ನು ನಿಪಿ.**6** ಎಂದು, ಸಂತತಿ ನಕ್ಷೆಯನ್ನು ನಿಪಿ.**7** ಎಂದು, ಓ.ಎಸ್. 156/2024, ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ ಕೋರ್ಟ್, ಪುತ್ತೂರು ಇವರು ನೀಡಿರುವ ನೋಟೀಸ್ ನ್ನು ನಿಪಿ.**8** ಎಂದು ಗುರುತಿಸಲಾಯಿತು. ಈ ಮೇಲ್ಕಂಡ ನಿಪಿ.1 ರಿಂದ 8ರಲ್ಲಿನ ದಾಖಲೆಗಳನ್ನು ಎದುರುದಾರರ ಪರ ವಕೀಲರ ತಕರಾರಿನ ಮೇರೆಗೆ ಗುರುತಿಸಲಾಯಿತು.

ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ವಿಚಾರಣೆಯನ್ನು ಮುಂದೂಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು